ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಅಕ್ಟೋಬರ್ ೧೬, ೨೦೧೪ (ಆಶ್ವಯುಜ ೨೪, ಶಕ ವರ್ಷ ೧೯೩೬) Bangalore, Thursday, October 16, 2014 (Aashwayuja 24, Shaka Varsha 1936)	ಸಂಚಿಕೆ ೪೧ Issue 41

ಭಾಗ ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

IN THE COURT OF THE HON'BLE PRICIPAL CITY CIVIL JUDGE MAYO HALL, BANGALORE

P&S.C. No. 25032 of 2014 (CCH-21) Hg: 25-10-2014

PETITIONER : Smt. Aruna Avinash
W/o Late Avinash Bellubbi @ P.B. Avinash, Age 63 years,
Residing at # 192/Y 3rd Block, Bhasyam Circle, Rajajinagar, Bangalore North, Bangalore-560010

V/s

RESPONDENT : NIL

PUBLIC NOTICE

Notice is hereby given that a petitioner has been made to this Court under Part X Chapter XIII, Section 372(1) of the Indian Succession Act, 1925 for grant of Succession Certificate to the Petitioner's in respect of the Schedule Properties/Shares of Late Avinash Bellubbi @ P.B. Avinash who died on 19-05-2013 at Bangalore.

Be it known that no Caveat has been entered and the said petition is Posted for hearing **25-10-2014 at 11'O' Clock.** Any Person/s claiming to have any interest may come and participate in the proceedings before the grant of Succession Certificate.

MOVABLE PROPERTY CONSISTS OF

Movable Property Consists	A/c No	Amount
1. Syndicate Bank, Vijay Nagar, Hubli	A/c No. 12042200000290	Rs. 3,09,319
2. Vijaya Bank, Bangalore	A/c No. 22795	Rs. 10,000

IMMOVABLE PROPERTY:

SCHEDULE

All that piece and parcel of property bearing Plot No. 12 Vijaynagar Housing Co-operative Society, bearing C T Sy. No. 1842-A measuring 419 3/9 Sq. Yard along with the RCC structured House constructed in the year 1973 measuring 2000 Sq. Ft. along with open space situated at Vijaynagar Layout, Nagashetty koppa village, Hubli Taluk, Dist. Dharawad and bounded on the :

East by : C.Sy No. 1844
West by : C.Sy No. 1841
North by : C.Sy No.1003
South by : M.C. Road

Bangalore
Date : 5-9-2014

By Order of the Court,
Assistant Registrar,
Bangalore.

PD - 49
SC – 5

Office of the Resident Commissioner

ಅಧಿಸೂಚನೆ

ಸಂಖ್ಯೆಃ ಆರ್.ಸಿ.ಕೆ. 69 ಎಸ್.ಇ.ಎಸ್.2006-07, ದಿನಾಂಕ 19-07-2014

ವಿಷಯ : ನವದೆಹಲಿಯ ನಿವಾಸಿ ಆಯುಕ್ತರ ಕಛೇರಿಯಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರು (ಪರಿಶಿಷ್ಟ ಪಂಗಡ) ಮತ್ತು ಕಿರಿಯ ಸಹಾಯಕರು (ಪರಿಶಿಷ್ಟ ಜಾತಿ) ಬ್ಯಾಕ್‌ಲಾಗ್ ಹುದ್ದೆಯನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತಾದ ಅಧಿಸೂಚನೆಯನ್ನು ರದ್ದುಗೊಳಿಸುವ ಬಗ್ಗೆ.

ಉಲ್ಲೇಖ : (1) ನಿವಾಸಿ ಆಯುಕ್ತರ ಕಛೇರಿಯ ಅಧಿಸೂಚನೆ ಸಂಖ್ಯೆ ಆರ್.ಸಿ.ಕೆ./69/ಎಸ್.ಇ.ಎಸ್./2006-2007, ದಿನಾಂಕ 20-12-2012.

(2) ಸರ್ಕಾರದ ಪತ್ರ ಸಂಖ್ಯೆ ಡಿಪಿಎಆರ್ 82 ಹೆಚ್‌ಎಮ್.ಬಿ. 2013, ದಿನಾಂಕ 29-03-2014.

(3) ಸರ್ಕಾರದ ಪತ್ರ ಸಂಖ್ಯೆ ಸಿಆಸುಇ 179 ಅಕಿಸೇ 2013, ದಿನಾಂಕ 7-4-2014.

(4) ಸರ್ಕಾರದ ಪತ್ರ ಸಂಖ್ಯೆ ಸಿಆಸುಇ 131 ಅಕಿಸೇ 2014, ದಿನಾಂಕ 07-07-2014.

ನವದೆಹಲಿಯ ನಿವಾಸಿ ಆಯುಕ್ತರ ಕಛೇರಿಯಲ್ಲಿ ಖಾಲಿಯಿರುವ ಒಂದು ಶೀಘ್ರಲಿಪಿಗಾರರ (ಪರಿಶಿಷ್ಟ ಪಂಗಡ) ಮತ್ತು ಒಂದು ಕಿರಿಯ ಸಹಾಯಕ (ಪರಿಶಿಷ್ಟ ಜಾತಿ) ಬ್ಯಾಕ್‌ಲಾಗ್ ಹುದ್ದೆಯನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಈ ಕಛೇರಿಯ ಅಧಿಸೂಚನೆ ಸಂಖ್ಯೆ ಆರ್.ಸಿ.ಕೆ./69/ಎಸ್.ಇ.ಎಸ್./2006-2007, ದಿನಾಂಕ 20-12-2012 ರಲ್ಲಿ ಆಹ್ವಾನಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 131 ಅಕಿಸೇ 2014, ದಿನಾಂಕ 07-07-2014 ರಂತೆ ಸದರಿ ಅಧಿಸೂಚನೆಯನ್ನು ರದ್ದುಗೊಳಿಸಲಾಗಿದೆ.

ಮುಂದುವರೆದು, ನವದೆಹಲಿಯ ನಿವಾಸಿ ಆಯುಕ್ತರ ಕಛೇರಿಯಲ್ಲಿ ಖಾಲಿ ಇರುವ ಒಂದು ಶೀಘ್ರಲಿಪಿಗಾರರು (ಪರಿಶಿಷ್ಟ ಪಂಗಡ) ಮತ್ತು ಒಂದು ಕಿರಿಯ ಸಹಾಯಕ (ಪರಿಶಿಷ್ಟ ಜಾತಿ) ಬ್ಯಾಕ್‌ಲಾಗ್ ಹುದ್ದೆಯನ್ನು ಭರ್ತಿ ಮಾಡಲು ಪ್ರಚಲಿತ ದಿನಪತ್ರಿಕೆಗಳಲ್ಲಿ ಹೊಸದಾಗಿ ಅಧಿಸೂಚನೆಯನ್ನು ಪ್ರಕಟಿಸಲಾಗುವುದು. ಈ ಹಿಂದೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಹೊಸ ಪ್ರಕಟಣೆಯ ನಂತರ ಹೊಸದಾಗಿ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

VANDANA GURNANI, IAS
Resident Commissioner,
Government of Karnataka
New Delhi.

P.R. 97
SC - 10

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಮೈಸೂರು

ಒಪ್ಪೋಲೆ

ಸಂಖ್ಯೆಃ ಆಡಳಿತ/ಅ/14369/2014, ದಿನಾಂಕ 25-09-2014

ಉಲ್ಲೇಖ : 1) ಈ ಕಛೇರಿಯ ನೇಮಕಾತಿ ಅಧಿಸೂಚನೆ ಸಂಖ್ಯೆ : ಆಡಳಿತ/ಅ/12920/2014, ದಿನಾಂಕ 08-09-2014.

2) ಈ ಕಛೇರಿಯ ಒಪ್ಪೋಲೆ ಸಂಖ್ಯೆ : ಆಡಳಿತ/ಅ/14030/2014, ದಿನಾಂಕ 19-09-2014.

3) ಈ ಕಛೇರಿಯ ಟಿಪ್ಪಣಿ ಮತ್ತು ಆದೇಶ ದಿನಾಂಕ 25-09-2014.

ಈ ಕೆಳಕಂಡ ಒಪ್ಪೋಲೆಯನ್ನು ಮೇಲ್ಕಂಡ ಉಲ್ಲೇಖ-1ರಲ್ಲಿ ಓದಲಾಗಿರುವ ನೇಮಕಾತಿ ಅಧಿಸೂಚನೆಯ ಸಂಬಂಧ ಹೊರಡಿಸಲಾಗಿದೆ.

"ಈ ಕಛೇರಿಯ ದಿನಾಂಕ 08-09-2014ರ ನೇಮಕಾತಿ ಅಧಿಸೂಚನೆ ಸಂಖ್ಯೆ: ಆಡಳಿತ/ಅ/12920/2014ರ ಹುದ್ದೆಗಳ ವರ್ಗೀಕರಣದಲ್ಲಿ ಸಮತಳ ಮೀಸಲಾತಿಯಲ್ಲಿ ಈ ಕೆಳಕಂಡಂತೆ ಬದಲಾಗಿರುತ್ತದೆ ಹಾಗೂ ಕಡೆಯ ದಿನಾಂಕವನ್ನು 07-10-2014 ರಿಂದ 20-10-2014 ರಂದು ಸಂಜೆ 5.00 ಘಂಟೆಯವರೆಗೆ ವಿಸ್ತರಿಸಲಾಗಿರುತ್ತದೆ."

ಹುದ್ದೆಗಳ ವರ್ಗೀಕರಣ:

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ.	ಕ.ಮಾ.ಅ.	ಯೊ.ನಿ.ಅ.	ಅಂ.ಅ.	ಒಟ್ಟು
ಪ.ಜಾತಿ	–	02	02	–	–	–	01	05
ಪ.ಪಂಗಡ	–	–	01	–	–	–	–	01
ಪ್ರವರ್ಗ-1	01	–	–	–	–	–	–	01
II-ಎ	01	01	02	–	–	–	01	05
II-ಬಿ	01	–	–	–	–	–	–	01
III-ಎ	–	–	01	–	–	–	–	01
III-ಬಿ	–	–	01	–	–	–	–	01
ಸಾಮಾನ್ಯ	03	05	03	01	01	01	01	15
ಒಟ್ಟು	**06**	**08**	**10**	**01**	**01**	**01**	**03**	**30**

ಕೆ.ಎಸ್. ಮುದಗಲ್,
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಮೈಸೂರು.

P.R. 98

ಚಿತ್ರದುರ್ಗ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ

ಅಧಿಸೂಚನೆ ಸಂಖ್ಯೆ: 4/2014 ದಿನಾಂಕ: 20.09.2014

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 27.10.2014 ಸಂಜೆ 5–00 ಗಂಟೆ.

ವಿಷಯ:– ಚಿತ್ರದುರ್ಗ ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ, ಮತ್ತು ಜವಾನರ ಹುದ್ದೆಗಳ ನೇಮಕಾತಿ ಬಗ್ಗೆ:–

ಉಲ್ಲೇಖ:–
1. ಸರ್ಕಾರಿ ಆದೇಶ ಸಂಖ್ಯೆ: LAW 112 LCE 2012, dated: 28.12.2012.
2. ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ: LCA II/128/2012, dated: 21.01.2013.
3. ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ: LCA II/128/2012, dated: 24.09.2013.
4. ಈ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ 2/2008, ದಿ:23.06.2008 ಹಾಗೂ 3/2013, ದಿ: 23.09.2013.
5. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮ ಹಾಗೂ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳ ನೇಮಕಾತಿ) ನಿಯಮ, 1982.
6. ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೇ ಹುದ್ದೆಗಳ ನೇಮಕಾತಿ) (ತಿದ್ದುಪಡಿ) ನಿಯಮ, 2007.
7. ಈ ಕಚೇರಿ ಟಿಪ್ಪಣಿ ಹಾಗೂ ದಿನಾಂಕ: 19.09.2014ರ ಟಿಪ್ಪಣಿ ಮೇಲಿನ ಆದೇಶ.

ಉಲ್ಲೇಖದಲ್ಲಿ ಓದಲಾದ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಇವರ ಪತ್ರದ ಮುಖಾಂತರ ನೇರ ನೇಮಕಾತಿಗೆ ಅನುಮತಿಸಲಾಗಿರುವ, ಚಿತ್ರದುರ್ಗ ಹಾಗೂ ಚಿತ್ರದುರ್ಗ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ ಹಾಗೂ ಜವಾನರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿರುವ ಅಭ್ಯರ್ಥಿಗಳು ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಅಥವಾ ಗಣಕೀಕೃತ ಅರ್ಜಿಯನ್ನು ರಚಿಸಿಕೊಂಡು ಅರ್ಜಿಯಲ್ಲಿ ಹುದ್ದೆಗೆ ಸಂಬಂಧಿಸಿದಂತೆ ಎಲ್ಲಾ ಅಂಕಣಗಳಲ್ಲಿ ಮಾಹಿತಿಯನ್ನು ಭರ್ತಿ ಮಾಡಿ **ದಿನಾಂಕ: 27.10.2014** ರಂದು ಸಂಜೆ 5.00 ಗಂಟೆ ಸಮಯದೊಳಗಾಗಿ **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗಕ್ಕೆ ತಲುಪುವಂತೆ ಸಲ್ಲಿಸತಕ್ಕದ್ದು.**

ಎ) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:08/ಸೇನೆನಿ/1995, ದಿನಾಂಕ:20.06.1995

ಬಿ) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:53/ಸೇನೆನಿ/2007, ದಿನಾಂಕ:04.01.2008

ಸಿ) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:128/ಸೇನೆನಿ/2008, ದಿನಾಂಕ:01.08.2009

ರ ಮೇಲ್ಕಂಡ ಸರ್ಕಾರಿ ಆದೇಶಗಳ ಅನುಸಾರ ವರ್ಗೀಕರಣವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

ಶೀಘ್ರಲಿಪಿಗಾರರು: ಹುದ್ದೆಗಳ ಸಂಖ್ಯೆ : 01

ಕ್ರ. ಸಂ.	ಮೀಸಲಾತಿ ವರ್ಗೀಕರಣ	ಹುದ್ದೆಗಳ ಸಂಖ್ಯೆ
1	**ಸಾಮಾನ್ಯ ಅಭ್ಯರ್ಥಿ (ಮಹಿಳೆ)**	**01**

ಜವಾನರು: ಹುದ್ದೆಗಳ ಸಂಖ್ಯೆ : 05

ಕ್ರ. ಸಂ.	ಮೀಸಲಾತಿ ವರ್ಗೀಕರಣ	ಹುದ್ದೆಗಳ ಸಂಖ್ಯೆ
1	**ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ)**	**01**
2	**ಪ್ರವರ್ಗ 3ಬಿ(ಗ್ರಾಮೀಣ)**	**01**
3	**ಸಾಮಾನ್ಯ ಅಭ್ಯರ್ಥಿ (ಕನ್ನಡ ಮಾಧ್ಯಮ)**	**01**
4	**ಪರಿಶಿಷ್ಟ ಜಾತಿ (ಮಹಿಳೆ)**	**01**
5	**ಸಾಮಾನ್ಯ ಅಭ್ಯರ್ಥಿ (ಇತರೆ)**	**01**
	ಒಟ್ಟು	**05 ಹುದ್ದೆಗಳು**

ಶೈಕ್ಷಣಿಕ ವಿದ್ಯಾರ್ಹತೆ:

1. ಶೀಘ್ರಲಿಪಿಗಾರರ ಹುದ್ದೆ:

1) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

2)ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ಅಥವಾ ಕರ್ನಾಟಕ ಸೆಕೆಂಡರಿ ಪ್ರೌಢ ಶಿಕ್ಷಣ ಪರೀಕ್ಷೆಗಳ ಮಂಡಳಿ ವತಿಯಿಂದ ನಡೆಸುವ ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಪ್ರೌಢದರ್ಜೆ ಹಾಗೂ ಕನ್ನಡ ಹಾಗೂ ಆಂಗ್ಲ ಶೀಘ್ರಲಿಪಿ ಪ್ರೌಢದರ್ಜೆ ಪರೀಕ್ಷೆಗಳಲ್ಲಿ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣತೆ.

ಅಥವಾ

ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟರಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಡಿಪ್ಲೋಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ಹಾಗೂ ಶೀಘ್ರಲಿಪಿ ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರಬೇಕು.

2. ಜವಾನರ ಹುದ್ದೆ:

1. 7ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
2. ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರಬೇಕು.

ಆಯ್ಕೆ ವಿಧಾನ:

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮ ಹಾಗೂ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳ ನೇಮಕಾತಿ) ನಿಯಮ, 1982 ಮತ್ತು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳ ನೇಮಕಾತಿ) (ತಿದ್ದುಪಡಿ) ನಿಯಮ, 2007.

ಶೀಘ್ರಲಿಪಿಗಾರರ ಹುದ್ದೆಗಳಿಗೆ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಅರ್ಹತಾ ಪರೀಕ್ಷೆಯನ್ನು ಏರ್ಪಡಿಸಲಾಗುವುದು.

ಶೀಘ್ರಲಿಪಿಗಾರರ ಅರ್ಹತಾ ಪರೀಕ್ಷೆ :

1. ಅಭ್ಯರ್ಥಿಯು ನೇಮಕಾತಿ ಪ್ರಾಧಿಕಾರದಿಂದ ನಾಮ ನಿರ್ದೇಶಿಸಲ್ಪಟ್ಟ ಅಧಿಕಾರಿಯವರಿಂದ ಪ್ರತಿ ನಿಮಿಷಕ್ಕೆ 120 ಪದಗಳ ವೇಗದಂತೆ 05 ನಿಮಿಷಗಳಲ್ಲಿ ನೀಡುವ ಉಕ್ತಲೇಖನವನ್ನು ಸುಮಾರು 45 ನಿಮಿಷದ ಕಾಲಾವಕಾಶದಲ್ಲಿ ಬೆರಳಚ್ಚು ಯಂತ್ರದಲ್ಲಿ ಲಿಪ್ಯಂತರಿಸತಕ್ಕದ್ದು,
2. ಈ ಪರೀಕ್ಷೆಯು ಗರಿಷ್ಟ 100 ಅಂಕಗಳದ್ದಾಗಿದ್ದು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಕನಿಷ್ಟ 50 ಅಂಕಗಳನ್ನು ಪಡೆಯತಕ್ಕದ್ದು.

ಮೇಲೆ ಹೇಳಿದ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡವಾರು ಅಂಕಗಳು ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಹಾಗೂ ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಜವಾನರ ಹುದ್ದೆಗಳಿಗೆ :

ಜವಾನರ ಹುದ್ದೆಗೆ 7ನೇ ತರಗತಿ ಪರೀಕ್ಷೆಯಲ್ಲಿ ಪಡೆದ ಗರಿಷ್ಟ ಅಂಕಗಳ ಅರ್ಹತೆಯ ಆಧಾರದ ಅನ್ವಯ 01 ಹುದ್ದೆಗೆ 10ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನದ ಪ್ರಕ್ರಿಯೆಗೆ ತೊಡಗಿಸಲಾಗುವುದು ಹಾಗೂ ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಪರಿವೀಕ್ಷಣಾ ಅವಧಿ:

ನೇಮಕ ಹೊಂದಿದ ಅಭ್ಯರ್ಥಿಗಳನ್ನು ಕರ್ನಾಟಕ ಸೇವಾ ನಿಯಮ, ಪರಿವೀಕ್ಷಣಾ ನಿಯಮ 1977ರ ಪ್ರಕಾರ 02 ವರ್ಷಗಳ ಪರಿವೀಕ್ಷಣಾ ಅವಧಿಯಲ್ಲಿರತಕ್ಕದ್ದು, ಹಾಗೂ ಸದರಿ ಅವಧಿಯಲ್ಲಿ ತಮ್ಮ ಹುದ್ದೆಗಳಿಗೆ ಯಾವುದಾದರೂ ಇಲಾಖಾ ಪರೀಕ್ಷೆಗಳಲ್ಲಿ ಹಾಗೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ನಿಯಮದಡಿ ಗೊತ್ತುಪಡಿಸಿದರೆ ಅವುಗಳಲ್ಲಿ ಉತ್ತೀರ್ಣರಾಗತಕ್ಕದ್ದು.

ಪಿಂಚಣಿ ಸೌಲಭ್ಯ:

ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ. (ಎಸ್.ಪಿ.ಎಲ್)/04/ಪಿ.ಇ.ಟಿ/2005, ದಿನಾಂಕ:31.03.2006 ರಂತೆ ಅನ್ವಯಿಸುವುದು.

ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ವಿಧಾನ

ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆಯುವುದರ ಮೂಲಕ ಅರ್ಜಿಯನ್ನು ಸಮುಚಿತ ಮಾರ್ಗದ ಮುಖಾಂತರ ಸಲ್ಲಿಸತಕ್ಕದ್ದು.

ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 43 ಸೇವನೆ 2008, ದಿ: 07.03.2012 ರನ್ವಯ ಆಯ್ಕೆಯಾದ ಶೀಘ್ರಲಿಪಿಗಾರರು ಕರ್ನಾಟಕ ಸರ್ಕಾರ ನಿಗದಿಪಡಿಸುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಶೇ.60 ಅಂಕಗಳಿಗೆ ಕಡಿಮೆ ಇಲ್ಲದಂತೆ ಪಡೆದು, ಆಯ್ಕೆಯಾದ ಮೂರು ತಿಂಗಳೊಳಗೆ ಪಾಸು ಮಾಡತಕ್ಕದ್ದು. ತಪ್ಪಿದ್ದಲ್ಲಿ ಸದರಿ ನೇಮಕಾತಿಯನ್ನು ಅನರ್ಹಗೊಳಿಸಲಾಗುವುದು.

ವೇತನ ಶ್ರೇಣಿ :

ಶೀಘ್ರಲಿಪಿಗಾರರು	ರೂ.14550–350–15600–400–17200–450–19000–500–21000–600–24600–700–26700 ಮತ್ತು ಇತರೆ ಭತ್ಯೆಗಳು
ಜವಾನರು	ರೂ.9600–200–12000–250–13000–300–14200–350–14550 ಮತ್ತು ಇತರೆ ಭತ್ಯೆಗಳು

ವಯೋಮಿತಿ:–

ಕನಿಷ್ಟ 18 ವರ್ಷಗಳು

ಗರಿಷ್ಟ :

ಸಾಮಾನ್ಯ ವರ್ಗ	35 ವರ್ಷ
ಪರಿಶಿಷ್ಟ ಜಾತಿ	40 ವರ್ಷ
ಪ್ರವರ್ಗ 3 ಬಿ	38 ವರ್ಷ

1. ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಟ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.
2. ಸರ್ಕಾರಿ ಸೇವೆಯಲ್ಲಿರುವವರಿಗೆ/ವಿಧವೆಯರಿಗೆ/ಅಂಗವಿಕಲರಿಗೆ ವಯೋಮಿತಿಯಲ್ಲಿ 10 ವರ್ಷಗಳ ಗರಿಷ್ಠ ಮಿತಿಯಲ್ಲಿ ಸಡಿಲಿಕೆ ಇರುತ್ತದೆ.

3. ಮಾಜಿ ಸೈನಿಕರಿಗೆ ಗರಿಷ್ಟ ವಯೋಮಿತಿ, ಅವನು ಸಶಸ್ತ್ರ ದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳು ಆಗುವುದೋ ಅಷ್ಟು ವರ್ಷಗಳ ಸಡಿಲಿಕೆ.

4. ವಿಧವೆಯಾಗಿದ್ದರೆ ಅವರು ಗರಿಷ್ಟ ವಯೋಮಿತಿ ಸೌಲಭ್ಯವನ್ನು ಕೋರುವವರು ವಿಧವೆಯೆಂಬ ಬಗ್ಗೆ ತಹಶೀಲ್ದಾರ್ ದರ್ಜೆಗೆ ಕಡಿಮೆ ಇಲ್ಲದ ಕಂದಾಯ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರಗಳನ್ನು ದ್ವಿಪ್ರತಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

5. ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ ಪಕ್ಷದಲ್ಲಿ ಗರಿಷ್ಟ ವಯೋಮಿತಿಯನ್ನು ಅಭ್ಯರ್ಥಿಯು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸೇವೆ ಸಲ್ಲಿಸಿದ್ದಾರೋ ಅಷ್ಟು ವರ್ಷಗಳ ಅಥವಾ 05 ವರ್ಷಗಳ ಅವಧಿ, ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು ಅನ್ವಯಿಸುತ್ತದೆ.

ಸಾಮಾನ್ಯ ಸೂಚನೆಗಳು:–

1) ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗತ್ತಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಚಳ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈ ಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

2) **ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಹಾಗೂ ಮೀಸಲಾತಿಯಡಿಯಲ್ಲಿ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ಅರ್ಜಿ ನಮೂನೆಗಳಲ್ಲಿ ಅರ್ಜಿ ಸಲ್ಲಿಸತಕ್ಕದ್ದು.**

3) ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಫೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.

4) ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾಗಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರ ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. (ಮೂಲ ಪ್ರತಿಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ,) ಲಗತ್ತೀಕರಿಸಿದ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸುವ ದಿನಾಂಕದ ಒಳಗೆ ಪಡೆದಿರಬೇಕು.

5) ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ನಡತೆ ಮತ್ತು ಶೀಲದ ಬಗ್ಗೆ ತಮ್ಮ ಸಂಬಂಧಿಯಲ್ಲದ ಸಮಾಜದ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣ ಪತ್ರಗಳನ್ನು ಹಾಗೂ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ/ವಿದ್ಯಾಲಯದಿಂದ ಪಡೆದ ಒಂದು ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

6) ಅಭ್ಯರ್ಥಿಗಳು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸಿರುವುದು ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

7) ಅಪೂರ್ಣವಾಗಿರುವ, ಸಹಿ ಮಾಡದ ಮತ್ತು ವಿದ್ಯಾರ್ಹತೆ, ಜನ್ಮ ದಿನಾಂಕ, ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

8) ಸರ್ಕಾರಿ ಮತ್ತು ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಮುಚಿತ ಮಾರ್ಗದ ಮುಖಾಂತರ ಸಲ್ಲಿಸಬೇಕು. ಇಲ್ಲವಾದಲ್ಲಿ ಸದರಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

9) ಅಭ್ಯರ್ಥಿಗಳು ತಮ್ಮ ಅರ್ಜಿಯ ಜೊತೆ ಸ್ವ ವಿಳಾಸವಿರುವ ಲಕೋಟೆಯನ್ನು ಸಲ್ಲಿಸಬೇಕು ಸದರಿ ಲಕೋಟೆಯ ಮೇಲೆ ನೋಂದಾಯಿತ ಅಂಚೆಗೆ ತಗಲುವ ಅಂಚೆ ಚೀಟಿಯನ್ನು ಲಗತ್ತಿಸಿರಬೇಕು.

10) ಅರ್ಜಿದಾರರು ಯಾವ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆಂಬುದನ್ನು **ದಪ್ಪ ಅಕ್ಷರಗಳಲ್ಲಿ ಲಕೋಟೆಯ ಮತ್ತು ಅರ್ಜಿಯ ಮೇಲೆ ತಪ್ಪದೇ ನಮೂದಿಸತಕ್ಕದ್ದು.**

11) ಸಂದರ್ಶನಕ್ಕೆ ಅರ್ಹತೆ ಗಳಿಸಿದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.

12) ಅಸಮರ್ಪಕ ಅಥವ ಅಪೂರ್ಣ ಅಂಚೆ ವಿಳಾಸದಿಂದ ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುದಿಲ್ಲ.

13} ವಿವರ ತುಂಬಿರುವ ಅರ್ಜಿಗಳನ್ನು ಈ ಕಚೇರಿಯ ವಿರಾಮದ ವೇಳೆಯನ್ನು ಹೊರತುಪಡಿಸಿ ಕೆಲಸದ ವೇಳೆಯಲ್ಲಿ ಮಾತ್ರ ಸ್ವೀಕರಿಸಲಾಗುವುದು.

14) ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ನಮೂನೆ–ಡಿ ಯಲ್ಲಿ ಹಾಗೂ ಪ್ರವರ್ಗ–2–ಎ, 2–ಬಿ, 3–ಎ, 3–ಬಿ, ಗೆ ಸೇರಿದ ಅಭ್ಯರ್ಥಿಗಳು ನಮೂನೆ–ಎಫ್ ನಲ್ಲಿ ಮತ್ತು ಪ್ರವರ್ಗ–1 ಗೆ ಸೇರಿದ ಅಭ್ಯರ್ಥಿಗಳು ನಮೂನೆ–ಇ ನಲ್ಲಿ ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ನೆರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು, ಹಾಗೂ ಸಂದರ್ಶನಕ್ಕೆ ಅರ್ಹರಾದ ಪಕ್ಷದಲ್ಲಿ ಅಭ್ಯರ್ಥಿಯು ಅರ್ಜಿಯೊಂದಿಗೆ ಸಲ್ಲಿಸಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಮೂಲ ಪ್ರತಿಯನ್ನೇ ಹಾಜರುಪಡಿಸತಕ್ಕದ್ದು.

15) ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/98/ಸೇನಿನಿ/2005, ದಿನಾಂಕ:10.08.2005ರ ಪ್ರಕಾರ ನಿಗಧಿತ ನಮೂನೆ 2 ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು ಅದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿ ನೆರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜು ಮಾಡಿಸದ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ವಿವಿಧ ಮೀಸಲಾತಿಯನ್ವಯ ಗ್ರಾಮೀಣ ಅಭ್ಯರ್ಥಿಗಳು ಲಭ್ಯವಿಲ್ಲದಿರುವ ಪಕ್ಷದಲ್ಲಿ ಸದರಿ ಹುದ್ದೆಯ ಆಯ್ಕೆಗೆ ಅದೇ ಮೀಸಲಾತಿ ಹೊಂದಿದ ಗ್ರಾಮೀಣರಹಿತ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

16) ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2 ರ ಮೀಸಲಾತಿ ಪ್ರಮಾಣ ಪತ್ರದ ಜೊತೆ ನಮೂನೆ–1ರಲ್ಲಿ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರದ ನರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು.

17) ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಸಹಿ ಮತ್ತು ಮೊಹರಿನೊಂದಿಗೆ ಪಡೆದು ಅದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಹಿ ಮಾಡಿಸಿ ನೆರಳಚ್ಚು ಪ್ರತಿಗಳನ್ನು ಸಲ್ಲಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜು ಮಾಡಿಸದ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

18) ಅಂಗವಿಕಲ ಮೀಸಲಾತಿ ಕೋರುವ ಅಭ್ಯರ್ಥಿಗಳು ದಿನಾಂಕಃ 19.05.2005ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆಃ ಸಿಆಸುಇಃ115/ಸೇನ ನಿ/2005ರಲ್ಲಿ ನಿಗಧಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದು ನೆರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು.

19) ಮಾಜೀ ಸೈನಿಕರು ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಬಿಡುಗಡೆಯಾದ ಬಗ್ಗೆ ವಿಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಕೆ.ಸೋಮಶೇಖರ್
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

ಅರ್ಜಿ ನಮೂನೆ

ಭಾವಚಿತ್ರ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ – ಇವರಿಗೆ.

ಮಾನ್ಯರೆ,

ಚಿತ್ರದುರ್ಗ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಧಿಸೂಚನೆ ಸಂಖ್ಯೆಃ4/2014 ದಿನಾಂಕಃ20.09.2014ರ ಪ್ರಕಾರ ________________ ಹುದ್ದೆಗೆ ನಾನು ____________ ಮೀಸಲಾತಿಯ ವರ್ಗದಡಿಯಲ್ಲಿ ಆಯ್ಕೆಯನ್ನು ಬಯಸಿ ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.

1	ಅಭ್ಯರ್ಥಿಯ ಹೆಸರು				
2	ತಂದೆಯ/ತಾಯಿಯ/ಗಂಡನ ಹೆಸರು				
3	ಪೂರ್ಣ ವಿಳಾಸ				
4	ವಯಸ್ಸು ಮತ್ತು ಜನ್ಮ ದಿನಾಂಕ				
5	ಲಿಂಗ ಪುರುಷ/ಮಹಿಳೆ				
6	ರಾಷ್ಟ್ರೀಯತೆ ಃ ಮತ ಃ ಜಾತಿ/ಉಪಜಾತಿ ಃ				
7	ಯಾವ ಹುದ್ದೆಗೆ ಅರ್ಜಿ ಸಲ್ಲಿಸಲು ಇಚ್ಛಿಸಿರುವುದರ ಬಗ್ಗೆ ನಮೂದಿಸುವುದು				
8	ಯಾವ ಮೀಸಲಾತಿಯಡಿಯಲ್ಲಿ ನೇಮಕಾತಿ ಅಪೇಕ್ಷಿಸುವಿರಿ ?				
9	ಶೈಕ್ಷಣಿಕ ವಿದ್ಯಾರ್ಹತೆಯ ವಿವರಗಳು ಃ–(ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)				
	ಉತ್ತೀರ್ಣ ಹೊಂದಿದ ಪರೀಕ್ಷೆಗಳು	ಉತ್ತೀರ್ಣ ಹೊಂದಿದ ವರ್ಷ ಮತ್ತು ನೋಂದಣಿ ಸಂಖ್ಯೆ	ಗರಿಷ್ಟ ಅಂಕಗಳು	ಪಡೆದಿರುವ ಅಂಕಗಳು	ಶೇಕಡವಾರು ಅಂಕಗಳು
ಎ	ಎಸ್.ಎಸ್.ಎಲ್.ಸಿ/ತತ್ಸಮಾನ ತರಗತಿ ಪರೀಕ್ಷೆ				
ಬಿ	ಹಿರಿಯ ದರ್ಜೆ ಕನ್ನಡ ಮತ್ತು ಆಂಗ್ಲ ಶೀಘ್ರಲಿಪಿ ಪರೀಕ್ಷೆ.				
ಸಿ	ಹಿರಿಯ ದರ್ಜೆ ಕನ್ನಡ ಮತ್ತು ಆಂಗ್ಲ ಬೆರಳಚ್ಚು ಪರೀಕ್ಷೆ.				
ಡಿ	7ನೇ ತರಗತಿ ಪರೀಕ್ಷೆ				
10	ಜಾತಿ/ಗ್ರಾಮೀಣ/ಮಾಜಿ ಸೈನಿಕ/ಅಂಗವಿಕಲ/ ವಿಧವೆ ಮೀಸಲಾತಿ ಸೌಲಭ್ಯ ಪಡೆಯ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ				

11	ನೀವು ಪ್ರಸ್ತುತ ಸರ್ಕಾರಿ ಸೇವೆಯಲ್ಲಿರುವಿರಾ (ನಿರಾಪೇಕ್ಷಣಾ ಪ್ರಮಾಣ ಪತ್ರ ಲಗತ್ತಿಸುವುದು)?	
12	ಸ್ವ-ವಿಳಾಸದ ಲಕೋಟೆಯ ಮೇಲೆ ನೋಂದಾಯಿತ ಅಂಚೆಗೆ ತಗಲುವ ಅಂಚೆ ಚೀಟಿಯನ್ನು ಲಗತ್ತಿಸಿರುತ್ತೀರಾ?	
13	ಅರ್ಜಿಸಲ್ಲಿಸಲು ಇಚ್ಛೆ ಪಡುವ ಇತರೆ ಯಾವುದಾದರು ವಿವರಗಳುಃ	

ಸೂಚನೆಃ– ಅಭ್ಯರ್ಥಿಯು ತನಗೆ ಅನ್ವಯವಾಗದ್ದನ್ನು ಹೊಡೆದು ಹಾಕುವುದು.

ಘೋಷಣೆ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದ್ದು ಹಾಗೂ ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ಬಿಟ್ಟು ಬಿಡಲು ಹಾಗೂ ಅಗತ್ಯ ಶಿಸ್ತಿನ ಕ್ರಮ ಎದುರಿಸಲು ನಾನು ಬದ್ದನಾಗಿರುತ್ತೇನೆ/ ಬದ್ದಳಾಗಿರುತ್ತೇನೆ. ನಾನು ಆಯ್ಕೆಗೊಂಡರೆ ಚಿತ್ರದುರ್ಗ ಜಿಲ್ಲಾ ಘಟಕದ ಯಾವುದೇ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ದನಿದ್ದೇನೆ/ಸಿದ್ದಳಿದ್ದೇನೆ.

ಸ್ಥಳಃ

ದಿನಾಂಕಃ ಅಭ್ಯರ್ಥಿಯ ಸಹಿ.

ಅಭ್ಯರ್ಥಿಯು ಸರ್ಕಾರಿ ನೌಕರನಾಗಿದ್ದ ಪಕ್ಷದಲ್ಲಿ ನೇಮಕಾತಿ ಪ್ರಾಧಿಕಾರಗಳ ದೃಢೀಕರಣ ಪತ್ರ

ಶ್ರೀ/ಶ್ರೀಮತಿ .... ಇವರು ನಮ್ಮ ಇಲಾಖೆಯಲ್ಲಿ ದಿನಾಂಕಃ .... ರಿಂದ .... ರವರೆಗೆ ಸೇವೆ ಸಲ್ಲಿಸುತ್ತಿದ್ದು ಅಭ್ಯರ್ಥಿಯ ನಡೆತೆಯು ಉತ್ತಮವಾಗಿದ್ದು .... ಹುದ್ದೆಗೆ ಅರ್ಹರಿರುತ್ತಾರೆ ಮತ್ತು .... ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ.

ಸ್ಥಳಃ

P.R. 101 ಪ್ರಾಧಿಕಾರದ ಸಹಿ

KARNATAKA PUBLIC SERVICE COMMISSION , 'UDYOGA SOUDHA ' BANGALORE - 1

NOTIFICATION

No. E(2) 577/2014-15/PSC, Bangalore, Dated : 24-07-2014

Sub: Additional select list of candidates for recruitment to the post of Panchayath Development Officer in Department of Rural Development and Panchayath Raj.

Ref: 1. Notification No. E (2) 870/2010-11/psc Dated 18-03-2011.

2. Notification No. E (2) 21/2011-12/psc Dated 25-04-2011.

3. Notification No. E (2) 453/2013-14/psc Dated 15-06-2013.

4. Notification No. E (2) 605/2013-14/psc Dated 28-10-2013.

In pursuance of this Office Notification cited at reference 1 & 2 the provisional select list of candidates for recruitment to 1353 posts of Panchayath Development Officer in the Department of Rural Development and Panchayath Raj was published on 15-06-2013 and final select list on 28-10-2013.

In accordance with the Rule(7) of KARNATAKA GENERAL SERVICES (Development Branch and Local Government Branch) (Recruitment) (Amendment) Rules 2009 Additional Select List of candidates is prepared and published for information of the candidates.

Name of the Department : **RURAL DEVELOPMENT AND PANCHAYATRAJ**

Appointing Authority : **CHIEF EXECUTIVE OFFICER**
ZILLA PANCHAYATH, RAICHUR DISTRCT

SL.NO.	REG. NO.	NAME OF THE CANDIDATE	RESEVERVATION	D_O_B	MARKS
1	507552	VINAYAKUMAR PATIL H.O.-2-11-895/46, BEHIND SAI MANDIR, AZAD NAGAR, TQ. LINGASUR, DIST. RAICHUR-584122	GM	17-01-87	82

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment WPP No. 297

SL.NO.	REG. NO.	NAME OF THE CANDIDATE	RESEVERVATION	D_O_B	MARKS
2	507555	CHANNAPPA AT. POST ARKERA TQ. DEVADURGA DIST. RAICHUR-584111	GM/3B/RL	01-06-78	81
3	360084	SANGAPPA NANDYAL SANGAPPA B. NANDYAL AT POST: YATNATTI TQ. BILAGI DIST. BAGALKOT-587116	GM/3B/PDP	01-05-83	77
4	508196	SAVITHA C/O-MALLAPPA TUPPAD KHADRIYA COLONY SINDHNOOR-584125	GM/W	01-04-78	68
5	507158	LAKSHMI H.NO. 1-11-244, BELLAM LAYOUT, RAMPUR MAIN ROAD, NIJALINGAPPA COLONY, RAICHUR-584101	GM/ST/W	01-10-80	68
6	541072	SANGANNA SANGANNA S/O BHEEMANNA H.NO. TG-4/5 BHEEMARAYAN GUDI TQ. SHAHAPUR DIST. YADAGIRI-585287	2A/PDP	15-06-84	67
7	471005	AMARESHAPPA AMARESHAPPA S/O JAMPANNA RATHOD AT INGALADAL POST CHIKKABOMMANAL TQ. GANGAVATHI DIST. KOPPAL-584119	SC/PDP	01-06-82	62
8	471926	VASANTGEETA VASANTGEETA C/O., RAVIKUMAR INGALADAL PATTALACHINTI, TQ. KUSTHAGI DIST. KOPPAL-584166	C1/W	01-06-84	62
9	509507	KHAJA BEGUM KHAJA BEGUM D/O KHAJA HUSSAIN H NO 7/15 JETTY COLONY HUTTI CAMP TQ. LINGASGUR-584115	2B/W	10-08-88	61

Note : The selection of all the candidates in this additional select list is subject to the final decision in W.P. No. 15810-822/2011 and in Applicaiton No. 2479-2481/2010, 7789/2011 and 2214/2013 before the Hon'ble High Court and Hon'ble KAT.

MANOJ KUMAR MEENA, IAS
Secretary
Karnataka Public Service Commission
Bangalore – 560 001.

P.R. 77
SC - 25

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.